## ದಿನಾಂಕ :07-11-2020 ರಂದು ಮುಂಜಾನೆ 10.30 ಗಂಟೆಗೆ ವಾರ್ಡ್ ಸಂಖ್ಯೆ-161 ರ ವಾರ್ಡ್ ಸಮಿತಿಯ ಸಭೆಯ ನಡವಳಿಗಳು :-

### ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು

1) ಶ್ರೀ ಧರಣೇಂದ್ರಕುಮಾರ್ ವಾರ್ಡ್ ಸಮಿತಿಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿ.

2) ಶ್ರೀ ಚೇತನ್ ಎನ್ ಎಸ್ ನಾಯಕ್, ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು, ಬಿಬಿಎಂಪಿ

3) ಶ್ರೀ ಸುರೇಶ್.ಜಿ, ಕಂದಾಯ ಪರಿವೀಕ್ಷಕರು, ಬಿ.ಬಿ.ಎಂ.ಪಿ

4) ಶ್ರೀಮತಿ ಧನಲಕ್ಷ್ಮಿ ಕೆ.ವಿ ಹಿರಿಯ ಆರೋಗ್ಯ ಪರಿವೀಕ್ಷಕರು, ಬಿ.ಬಿ.ಎಂ.ಪಿ

5) ಶ್ರೀಮತಿ ಮಧುಶ್ರೀ ಎನ್, ಕಿರಿಯ ಆರೋಗ್ಯ ಪರಿವೀಕ್ಷಕರು, ಬಿ.ಬಿ.ಎಂ.ಪಿ

6) ಶ್ರೀ ಪಿ.ಲೋಕೇಶ್, ಮೇಲ್ವಿಚಾರಕರು, ಎಸ್.ಡಬ್ಲ್ಯೂ.ಎಂ.

ವಾರ್ಡ್ ಸಮಿತಿ ಸಂಚಾಲಕರು ಮತ್ತು ಸಹಾಯಕ ಅಭಿಯಂತರರು ಹೊಸಕೆರೆಹಳ್ಳಿ ವಾರ್ಡ್ ಸಂಖ್ಯೆ-161 ರವರಾದ ಶ್ರೀ ವೆಂಕಟಮಲವಯ್ಯ ರವರು ಪ್ರಾರಂಭದಲ್ಲಿ ಉಪಸ್ಥಿತರಿದ್ದ ನೋಡೆಲ್ ಅಧಿಕಾರಿ ಮತ್ತು ವಾರ್ಡ್ ಸಮಿತಿಯ ಅಧ್ಯಕ್ಷರು ಮತ್ತು ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ ವಾರ್ಡ್ ಸಮಿತಿ ಸಭೆಯನ್ನು ಪ್ರಾರಂಭಿಸಲಾಯಿತು

ನೋಡೆಲ್ ಅಧಿಕಾರಿಗಳ ಜೊತೆಯಲ್ಲಿ 3ನೇ ಸಭೆಯನ್ನು ಅಯೋಜಿಸಲಾಗಿದ್ದು, ಸಭೆಯಲ್ಲಿ ಅಧಿಕಾರಿಗಳು, ರೆಸಿಡೆನ್ಸ್ ವೆಲ್‌ಫೇರ್ ಆಸೋಸಿಯೇಶನ್ ಹಾಗೂ ಸಾರ್ವಜನಿಕರವರಿಗೆ ಪ್ರಮುಖವಾಗಿ ಕೋವಿಡ್-19 ರ ಬಗ್ಗೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಹಾಗೂ ಸಾರ್ವಜನಿಕರಿಗೆ ಮೊದಲನೇ ಅಧ್ಯತೆಯನ್ನು ಕೋವಿಡ್-19 ಗೆ ಒತ್ತು ನೀಡುವಂತೆ ನೋಡೆಲ್ ಅಧಿಕಾರಿಯವರು ಸೂಚಿಸಿರುತ್ತಾರೆ.

ಹಿಂದಿನ ವಾರ್ಡ್ ಸಭೆಯ ನಡವಳಿಗಳನ್ನು ಚರ್ಚಿಸಲಾಗಿರುತ್ತದೆ.

1) ಕಂದಾಯ ಅಧಿಕಾರಿಗಳೊಂದಿಗೆ ಚರ್ಚಿಸಿ ಹಿಂದಿನ ಸಭೆಯಲ್ಲಿ ತಿಳಿಸಿದ ಹಾಗೆ ಕಂದಾಯ ವಸೂಲಾತಿಯಲ್ಲಿ ಶೇಕಡ 1.5 ರಷ್ಟು ಹೆಚ್ಚಿಗೆಯಾಗಿರುವುದಾಗಿ ಇದುವರೆವಿಗೂ ಶೇ.54.50% ಹೆಚ್ಚಾಗಿದೆ ಎಂದು ಸಭೆಗೆ ತಿಳಿಸಿರುತ್ತಾರೆ. ಇನ್ನೂ ಹೆಚ್ಚಿನ ಪ್ರಯತ್ನ ಮಾಡಲು ಸಭೆಯಲ್ಲಿದ್ದ ಕಂದಾಯ ಅಧಿಕಾರಿಗಳಿಗೆ ನೋಡೆಲ್ ಅಧಿಕಾರಿಗಳು ಸೂಚಿಸಿರುತ್ತಾರೆ ಹಾಗೂ ಬಿ ಖಾತೆಗಳನ್ನು ಎಷ್ಟು ಮಾಡಲಾಗಿದೆ ಎಂಬ ಮಾಹಿತಿ ನೀಡಲು ನೋಡೆಲ್ ಅಧಿಕಾರಿಗಳು ಸೂಚಿಸಿರುತ್ತಾರೆ.

2) ರೆವಿನ್ಯೂ ಬಡಾವಣೆಯಲ್ಲಿ ಕಂದಾಯ ವಸೂಲಾತಿ ಬಗ್ಗೆ ಚರ್ಚಿಸಲಾಗಿರುತ್ತದೆ.

3) ಮತದಾರರ ಬಗ್ಗೆ ಚರ್ಚಿಸಲಾಗಿ ಒಟ್ಟು 40,000/- (ನಲವತ್ತು ಸಾವಿರ) ಮತದಾರರಿರುವುದಾಗಿ ಸಭೆಗೆ ತಿಳಿಸಿರುತ್ತಾರೆ.

4) ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್‌ನಲ್ಲಿ 69 ಅಂಗಡಿಗೆ ಪರವಾನಗೆ ನೀಡಿರುವುದಾಗಿ ಸಭೆಗೆ ತಿಳಿಸಿರುತ್ತಾರೆ. ಬಾಕಿ ಇರುವ ಅಂಗಡಿಗಳಿಗೆ ಪರವಾನಗೆ ನೀಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿರುತ್ತದೆ.

5) ಕೋವಿಡ್-19 ಪರೀಕ್ಷೆಗಳಲ್ಲಿ ಪ್ರತಿ ದಿನ 140-160 ಆಗುತ್ತಿರುವುದಾಗಿ ತಿಳಿಸಿದಾಗ ಮಾನ್ಯ ನೋಡೆಲ್ ಅಧಿಕಾರಿಯವರು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಪರೀಕ್ಷೆ ಮಾಡಲು ಸಭೆಯಲ್ಲಿ ತಿಳಿಸಿರುತ್ತಾರೆ.

Scanned with CamScanner

6) ಮಳೆಯಿಂದ ತೊಂದರೆಗೆ ಒಳಗಾದ ಹೊಸಕೆರೆಹಳ್ಳಿ ಪ್ರದೇಶಗಳಲ್ಲಿ ಔಷಧಿಗಳನ್ನು ಸಿಂಪಡಿಸಲು ನೋಡಲ್ ಅಧಿಕಾರಿಯವರು ಸೂಚಿಸಿರುತ್ತಾರೆ.

7) ಪ್ರತಿ ವಾರ್ಡ್ ಸಮಿತಿ ಸಭೆಗೆ ಮಾರ್ಷಲ್‌ಗಳು ಹಾಜರಿರುವಂತೆ ಸಭೆಯಲ್ಲಿ ಸೂಚಿಸಲಾಗಿರುತ್ತದೆ.

8) ಬೆಸ್ಕಾಂ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿ ರಸ್ತೆ ಕತ್ತರಿಸಿರುವ ಜಾಗದಲ್ಲಿ ಅತಿ ಶೀಘ್ರವಾಗಿ ಮರು ಡಾಂಬರೀಕರಣ ಮಾಡಲು ಸೂಚಿಸಲಾಗಿರುತ್ತದೆ ಮತ್ತು ರವಿ ಹಿಲ್‌ವ್ಯೂ ಅಪಾರ್ಟ್‌ಮೆಂಟ್ ಮತ್ತು ವೆಂಕಟಪ್ಪ ಬಡಾವಣೆಯಲ್ಲಿ ಕೇಬಲ್ ಹಾಕಲು ರಸ್ತೆ ಕತ್ತರಿಸುವ ಅನುಮತಿಗೆ Book Adjustment ಮಾಡುವ ಬಗ್ಗೆ ಸೂಚಿಸಲಾಗಿರುತ್ತದೆ.

9) ಗೃಹಪಯೋಗಿ ವಿಧ್ಯುತ್ ಸಂಪರ್ಕ ಪಡೆಯಲು ರಸ್ತೆ ಕತ್ತರಿಸುವಾಗ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಎನ್.ಓ.ಸಿ ಪಡೆದಿರುವ ಬಗ್ಗೆ ಕಾತರಿ ಪಡಿಸಿಕೊಂಡು ಸಂಪರ್ಕ ನೀಡಲು ಬೆಸ್ಕಾಂ ಇಲಾಖೆಯವರಿಗೆ ಸೂಚಿಸಲಾಗಿರುತ್ತದೆ.

10) ಒಳಚರಂಡಿ ಮತ್ತು ಕುಡಿಯುವ ನೀರಿನ ಸಂಪರ್ಕಕ್ಕೆ ರಸ್ತೆ ಕತ್ತರಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಎನ್.ಓ.ಸಿ ಪಡೆದಿರುವ ಬಗ್ಗೆ ಕಾತರಿ ಪಡಿಸಿಕೊಂಡು ಸಂಪರ್ಕ ನೀಡಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯವರಿಗೆ ಸೂಚಿಸಲಾಗಿರುತ್ತದೆ.

11) ಶ್ರೀ ರಾಘವೇಂದ್ರಸ್ವಾಮಿ ದೇವಸ್ಥಾನದ ಎದುರು ರಸ್ತೆಯಲ್ಲಿ ರಸ್ತೆ ಕತ್ತರಿಸಿ ಒಳಚರಂಡಿ ಮಾರ್ಗ ಅಳವಡಿಸಲು ವಿಶೇಷ ಅನುಮತಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಅರ್ಜಿ ಸಲ್ಲಿಸಲು ಸೂಚಿಸಲಾಗಿರುತ್ತದೆ.

12) ದತ್ತಾತ್ರೇಯನಗರ 4ನೇ ಮುಖ್ಯರಸ್ತೆ ಮತ್ತು ರವಿಹಿಲ್‌ವ್ಯೂ ಅಪಾರ್ಟ್‌ಮೆಂಟ್‌ಗಳಲ್ಲಿ ನಡೆಯುತ್ತಿರುವ ಕೊಳವೆ ಮಾರ್ಗಗಳನ್ನು ತುರ್ತಾಗಿ ಮುಗಿಸಲು ಸೂಚಿಸಲಾಗಿರುತ್ತದೆ ಮತ್ತು ದಿನಾಂಕ :25-11-2020 ರ ಒಳಗಾಗಿ ಕೆಲಸ ಮುಗಿಸುದಾಗಿ ಅಧಿಕಾರಿಗಳು ಸಭೆಗೆ ತಿಳಿಸಿರುತ್ತಾರೆ.

13) ದತ್ತಾತ್ರೇಯನಗರ ದೇವಸ್ಥಾನದ ಎದುರು ರಸ್ತೆಯಲ್ಲಿ ಪೈಪ್‌ಲೈನ್ ಅಳವಡಿಸಲು ಕತ್ತರಿಸಿರುವ ರಸ್ತೆಯನ್ನು ಉತ್ತಮ ಸ್ಥಿತಿಗೆ ಅತೀ ಶೀಘ್ರವಾಗಿ ಮುಗಿಸಲು ಸಭೆಗೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ಸೂಚಿಸಿದರು.

ಮಾನ್ಯ ಆಯುಕ್ತರವರ ಸೂಚನೆಯಂತೆ ಪ್ರತಿ ಒಂದನೇ ಹಾಗೂ ಮೂರನೇ ಶನಿವಾರದಂದು ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲು ಹಾಗೂ ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ವಿಭಾಗದ ಅಧಿಕಾರಿಗಳು ಸಭೆಯಲ್ಲಿ ಹಾಜರಿರಲು ಕೋರುತ್ತಾ ಮತ್ತು ಮುಂದಿನ ಸಭೆಯಲ್ಲಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಶನ್ ರವರನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಹ್ವಾನಿಸಲು ಸಂಚಾಲಕರಿಗೆ ಸೂಚಿಸಿ ಸಭೆಯಲ್ಲಿ ಯಾವುದೇ ಪ್ರಸ್ತಾವನೆ ಮಾಡದಿದ್ದ ಕಾರಣ ನೋಡಲ್ ಅಧಿಕಾರಿ/ಅಧ್ಯಕ್ಷರ ಅಪ್ಪಣೆ ಮೇರೆಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

S.m. 07/11/2020.

ವಾರ್ಡ್ ಸಮಿತಿ ಸಂಚಾಲಕರು

ವಾರ್ಡ್ 161 ರ ನೋಡಲ್ ಅಧಿಕಾರಿ.

Scanned with CamScanner

ದಿನಾಂಕ:- 07-11-2020 ರಂದು ವಾರ್ಡ್ ಸಂ. 161ರ ವ್ಯಾಪ್ತಿಯಲ್ಲಿ
ನಡೆಸಿದ 08 ವಾರ್ಡ್ ಮಟ್ಟದ ಕ್ರಿಯಾ ಯೋಜನೆ ಸಭೆಯ ಹಾಜರಾತಿ
ವಿವರಗಳು.

| ಹೆಸರು & ಹುದ್ದೆ | ಮೊಬೈಲ್ ಸಂ. | ಸಹಿ. |
|---|---|---|
| G.M. Dharanendra Kumar Executive Engineer | 9480685655 | TS.M. [signature] 07/11/2020 |
| Madhusudhan N JH1 [161] | 9380550485 | Madhusudhan N |
| ರಾಜಶೇಖರ್. ಸಿ. ಆರ್ AE ಜಲಮಂ | 8277889657 | [signature] |
| G. Suresh Revene (TI) | 9060038884 | [signature] |
| Lokesh . P (Suprvr) | 9845553773 | [signature] |
| Dhanalakshmi. K.V. (Sr. H.I) | 9916044711 | [signature] |
| Chethan N.S. Naik (BBMP) | 9964843344 | [signature] |
| Sreedhar S. AE Rwss | 9845444031 | [signature] AE |
| Venkataramala Varidhy K AE-181 | 9735838938 | [signature] |